

ಹಲವು ರಚನೆಗಳು ಬಿಂಬಿಸುತ್ತವೆ. ಪ್ರಾಣಿ ಹಾಗೂ ಮಾನವನ ಬಲಿ ನಡೆದಿರುವುದಕ್ಕೂ ಪುರಾವೆಗಳು ದೊರೆತಿವೆ. ಅಗ್ನಿ ಹಾಗೂ ಜಲಪೂಜೆಯ ಪ್ರಾಚೀನ ಆಚರಣೆಯ ದೃಶ್ಯಗಳು ಚಿತ್ರಗಳಲ್ಲಿ ಕಾಣಸಿಗುತ್ತವೆ. ಮೆಸೊಅಮೆರಿಕನ್ ಇತಿಹಾಸದುದ್ದಕ್ಕೂ ಜನರು ಈ ನೆಲದೊಂದಿಗೆ ಹೊಂದಿದ್ದ ನಂಟಿನ ಸಾಂಕೇತಿಕ ಚಿತ್ರಗಳು ಕಾಣಸಿಗುತ್ತವೆ.

ಟಿಯೋಟಿಹುಕಾನ್‌ನಲ್ಲಿ ಪ್ರಮುಖವಾಗಿ ಎರಡು ಪಿರಮಿಡ್‌ಗಳಿವೆ. ಸೂರ್ಯನ ಪಿರಮಿಡ್ ಹಾಗೂ ಚಂದ್ರನ ಪಿರಮಿಡ್ (Pyramid of the sun and Pyramid of the moon). ಈ ಪಿರಮಿಡ್‌ಗಳಲ್ಲಿ ಇತಿಹಾಸದ ಕಥೆ ನಿರೂಪಿಸುವ ಹಲವು ರಚನೆಗಳಿದ್ದು, ಟಿಯೋಟಿಹುಕಾನ್ ಆಡಳಿತಗಾರರ ಸಮಾಧಿಗಳು ಇಲ್ಲಿ ಕಂಡುಬರುತ್ತವೆ. ಸುಮಾರು 200 ಜನರ ಸಮಾಧಿಗಳು ಪತ್ತೆಯಾಗಿದ್ದು, ಅನೇಕವುಗಳ ಮೇಲೆ ಯುವಕರು ಹಾಗೂ ಯೋಧರ ಚಿತ್ರಗಳಿವೆ. ಮನುಷ್ಯರು ಮಣಿಕಟ್ಟುಗಳನ್ನು ಬೆನ್ನಿಗೆ ಕಟ್ಟಿಕೊಂಡ ಸ್ಥಿತಿಯಲ್ಲಿನ ಕೆಲ ಚಿತ್ರಗಳಿದ್ದು, ಅವರ ಕೈಗಳನ್ನು ಹಿಂದಕ್ಕೆ ಕಟ್ಟಿ ಹಾಕಿರಬಹುದು ಅಥವಾ ಬಲಿ ಕೊಟ್ಟಿರಬಹುದು ಎಂದು ಅಂದಾಜಿಸಲಾಗಿದೆ. ಗೋರಿಗಳನ್ನು ಅಬ್ಸಿಡಿಯನ್ ಮತ್ತು ಗ್ರೀನ್ ಸ್ಟೋನ್‌ನಂತಹ ವಸ್ತುಗಳಿಂದ ನಿರ್ಮಾಣ ಮಾಡಲಾಗಿದೆ.

ಚಂದ್ರನ ಪಿರಮಿಡ್, ಅವೆನ್ಯೂದ ಉತ್ತರದ ತುದಿಯಲ್ಲಿದೆ. ಮೊದಲು ಒಂದು ಸಣ್ಣ ವೇದಿಕೆಯಾಗಿ ಪ್ರಾರಂಭವಾಗಿ, ಅಂತಿಮವಾಗಿ 150 ಅಡಿ ಎತ್ತರದ ಪಿರಮಿಡ್ ಆಗಿರುವ ಇದರ ತಳ 550 ಅಡಿ ಇದೆ.

## ವಿಶ್ವದ ಮೂರನೇ ದೊಡ್ಡ ಪಿರಮಿಡ್

ಸೂರ್ಯನ ಪಿರಮಿಡ್‌ಗೆ ಟಿಯೋಟಿಹುಕಾನ್‌ನಲ್ಲಿ ಅತಿ ಮಹತ್ವದ ಸ್ಥಾನ. ಚಂದ್ರನ ಪಿರಮಿಡ್‌ನಿಂದ ದಕ್ಷಿಣಕ್ಕೆ, ಅರ್ಧ ಮೈಲಿಗೂ ಕಡಿಮೆ ದೂರದಲ್ಲಿರುವ ಇದು ‘ವಿಶ್ವದ ಮೂರನೇ ಅತಿ ದೊಡ್ಡ ಪಿರಮಿಡ್’ ಎಂದು ಕರೆಸಿಕೊಂಡಿದೆ. 730 ಅಡಿಗಳಿಗಿಂತ ಹೆಚ್ಚು ಉದ್ದದ ಈ ಪಿರಮಿಡ್, ಕೊಲಂಬಿಯನ್ ಪೂರ್ವದಲ್ಲಿ ನಿರ್ಮಿಸಿದ ಅತಿ ದೊಡ್ಡ ರಚನೆಗಳಲ್ಲಿ ಒಂದು. ಸುಮಾರು 246 ಅಡಿ ಎತ್ತರದಲ್ಲಿದ್ದು, 248 ಮೆಟ್ಟಿಲುಗಳನ್ನು ಹತ್ತುವುದು ಅಷ್ಟು ಶ್ರಮದಾಯಕವಲ್ಲ. ವಿಶ್ರಾಂತಿ ಪಡೆಯಲು ಅಲ್ಲಿ ಸಾಕಷ್ಟು ಸ್ಥಳಗಳಿವೆ.



ಟಿಯೋಟಿಹುಕಾನ್‌ನಲ್ಲಿ ಕಂಡುಬಂದ ಪ್ರಾಚೀನ ಕೆತ್ತನೆಗಳು

ಸೂರ್ಯನ ಪಿರಮಿಡ್ ಮತ್ತು ಚಂದ್ರನ ಪಿರಮಿಡ್ ನಡುವಿನ ಸ್ವಲ್ಪ ವಿಸ್ತಾರವನ್ನು ಮಾತ್ರ ಉತ್ಖನನ ಮಾಡಲಾಗಿದೆ. ಈ ಪಿರಮಿಡ್‌ಗಳನ್ನು ಟ್ಯಾಲುಡ್ ಟ್ಯಾಬ್ಲೆರೊ (Talud Tablero) ಶೈಲಿಯಲ್ಲಿ ನಿರ್ಮಿಸಿರುವುದು ವಿಶೇಷ. ಟೈಕಾಲ್, ಕಾಮಿನಾಲಿಜುಯು, ಕೊಪಾನ್, ಬೇಕಾನ್ ಹಾಗೂ ನಿರ್ದಿಷ್ಟವಾಗಿ ಪೀಟೆನ್ ಬೇಸಿನ್‌ನಲ್ಲಿ ಈ ಶೈಲಿಯ ಪ್ರತಿಫಲನ ಕಾಣಬಹುದು.

ಇಷ್ಟೆಲ್ಲಾ ಕಲಾ ಪ್ರಕಾರಗಳನ್ನು, ಹಲವು ಗೋರಿಗಳನ್ನು ಹೊಂದಿದ್ದ ಸ್ಥಳ 7, 8ನೇ ಶತಮಾನದಲ್ಲಿ ವೈರಿಗಳಿಂದ ದಾಳಿಗೆ ತುತ್ತಾಯಿತು. ಆ ಅವಧಿಯಲ್ಲಿ ಹಲವು ಕಟ್ಟಡಗಳು, ಕಲಾ ರಚನೆಗಳು ನಾಶವಾಗಿವೆ, ಬೆಂಕಿಗೆ ಆಹುತಿಯಾಗಿವೆ. ಆನಂತರ ಅಧಿಕ ಜನಸಂಖ್ಯೆ, ಸಂಪನ್ಮೂಲಗಳ ಸವಕಳಿಯಿಂದಾಗಿ ನಾಗರಿಕತೆ ಅವನತಿ ಹಾದಿ ಹಿಡಿದ ಸಾಕ್ಷ್ಯಗಳು ದೊರೆತಿವೆ.

ಪಿರಮಿಡ್‌ಗಳೊಂದಿಗೆ, ಇಲ್ಲಿನ ‘ಲಾ ಸಿಯುಡಾಡೆಲಾ’ ದೇಗುಲದ ಮಾದರಿ ತನ್ನದೇ ವಿಶೇಷತೆಗಳಿಂದ ಗಮನ ಸೆಳೆಯಿತು. ರೆಕ್ಕೆಗಳಿರುವ ಸರ್ಪದ ದೇವಾಲಯ ಇದಾಗಿದ್ದು, ಸೂರ್ಯನ ಪಿರಮಿಡ್‌ನ ದಕ್ಷಿಣ ಭಾಗಕ್ಕಿದೆ. ಹಾವನ್ನು ಪೂಜೆ ಮಾಡುತ್ತಿದ್ದ ಸಂಕೇತಗಳು ಈ ದೇಗುಲದಲ್ಲಿವೆ. ಇಲ್ಲಿ ಕೂಡ ವಿಶೇಷ ಕಲಾರಚನೆಗಳಿವೆ.

1971ರಲ್ಲಿ ಪುರಾತತ್ತ್ವ ಶಾಸ್ತ್ರದ ತಂಡ ನಡೆಸಿದ ಉತ್ಖನನದಲ್ಲಿ ಸುರಂಗದಂತಹ ಹಲವು ಗುಹೆಗಳು ಟಿಯೋಟಿಹುಕಾನ್‌ನಲ್ಲಿ ಪತ್ತೆಯಾಗಿವೆ. ಇತ್ತೀಚೆಗೆ ಇದೇ ಸ್ಥಳದಲ್ಲಿ ಹಸಿರು ಬಣ್ಣದ ಸರ್ಪದ ಮುಖವಾಡವೊಂದು ದೊರೆತಿದೆ.

ಈ ಪಿರಮಿಡ್‌ಗಳನ್ನು ನೋಡುತ್ತಾ ಹೋದಂತೆ, ಕಣ್ಣಿಗೆ ಕಾಣದೆ ಕರಗುತ್ತಿರುವ ಇನ್ನೂ ಅದೆಷ್ಟು ಇತಿಹಾಸದ ಸಂಗತಿಗಳು ಈ ನೆಲದಲ್ಲಿ ಅಡಗಿವೆಯೋ ಎಂಬ ಪ್ರಶ್ನೆಯೂ ಮೂಡುತ್ತದೆ. ಅಪರೂಪದ ಕಲಾರಚನೆ ಹಾಗೂ ಇತಿಹಾಸವುಳ್ಳ ಈ ಪಿರಮಿಡ್‌ಗಳನ್ನು ನಾವು ಮನಸಾರೆ ನೋಡಿ ಆನಂದಿಸಿದೆವು, ಸಾಕಷ್ಟು ವಿಷಯಗಳನ್ನು ತಿಳಿದುಕೊಂಡೆವು. ಒಂದು ಒಳ್ಳೆಯ ಸ್ಥಳ ನೋಡಿದ ಖುಷಿಯೊಂದಿಗೆ ಅಮೆರಿಕದೆಡೆಗೆ ಮುಖ ಮಾಡಿದೆವು.

ಪ್ರತಿಕ್ರಿಯಿಸಿ: feedback@sudha.co.in